C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಸಂಖ್ಯೆ:101/2023 C/W SC 113/2023**

ಪ್ರಾಸಾ. 03 ಚಾಸಾ. 03

| | |
|---|---|
| ಸಾಕ್ಷಿದಾರರ ಹೆಸರು | ಅಮಿತ್ |
| ತಂದೆಯ ಹೆಸರು | ಶಿವಲಿಂಗೇಗೌಡ |
| ವಯಸ್ಸು | 28 ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ದೊಡ್ಡರಸಿನಕೆರೆ |

ಸಾಕ್ಷಿಯನ್ನು ದಿನಾಂಕ:07.04.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಚಾಸಾ-1 ಸ್ನೇಹಿತ ಮತ್ತು ಮೃತ ಅರುಣ ಉ: ಕಪ್ಪೆ ನನ್ನ ಸ್ನೇಹಿತರು, ಚಾಸಾ-4 ಮತ್ತು 5, 9 ಗೊತ್ತು, 6 ರಿಂದ 8 ಗೊತ್ತು. ಈ ಪ್ರಕರಣದಲ್ಲಿ ಹಾಗೂ ನ್ಯಾಯಾಲಯ ಮುಂದೆ ಇರುವ 1, ರಿಂದ 8ನೇ ಆರೋಪಿಗಳು ಗೊತ್ತು, ಅವರ ಮುಖ ಪರಿಚಯ ಇರುತ್ತದೆ, ಎಲ್ಲಾ ಸದರಿಯವರು ನಮ್ಮ ಗ್ರಾಮದವರು, 4, 5 ಮತ್ತು 7ನೇ ಆರೋಪಿಗಳು ಬೇರೆ ಗ್ರಾಮದವರು.

2. ಸಮಾರು ಎರಡು ವರ್ಷದ ಹಿಂದೆ ನಾನು ಮತ್ತು ಅರುಣ ಹಾಗೂ ಚಾಸಾ-2 ರವರು ಮಧ್ಯಾಹ್ನ ಊಟಕ್ಕೆ ನನಗೆ ಸೇರಿದ ದ್ವಿಚಕ್ರ ವಾಹನದಲ್ಲಿ ಕೆ.ಎಂ.ದೊಡ್ಡಿಯಲ್ಲಿರುವ ಮಿಲ್ಟ್ರಿ ಹೋಟೆಲ್ ಗೆ ಹೋಗಿ ನಂತರ ನಮ್ಮ ಊರಿನ ಸರ್ಕಲ್ ಸೊಸೈಟಿಯ ಬಳಿ ಅರುಣ ಇಳಿದುಕೊಂಡನು. ಅಭಿಷೇಕ್ ತನ್ನ ವಾಹನವನ್ನು ಸರ್ಕಲ್ ಬಳಿ ನಿಲ್ಲಿಸಿದ್ದ, ಆತ ತನ್ನ ವಾಹನದಲ್ಲಿ ಹೋದನು. ನಾನು ನನ್ನ ವಾಹನದಲ್ಲಿ ಮನೆಗೆ ಹೋದೆ. ಆಗ 2.00 ಗಂಟೆ ಆಗಿತ್ತು. ನಾನು ಮನೆಯಲ್ಲಿದ್ದಾಗ ಸರ್ಕಲ್ ಬಳಿ ಗಲಾಟೆ ಆಗಿದೆ

ಎಂದು ಗೊತ್ತಾಯಿತು. ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಯಾರು ಇರಲಿಲ್ಲ, ಅಲ್ಲಿ ಪೊಲೀಸರು ಇದ್ದರು.

3. ಆರೋಪಿತರು ಅರುಣ್ ರವರಿಗೆ ಹಲ್ಲೆ ಮಾಡಿದುದನ್ನು ನಾನು ನೋಡಿರುವುದಿಲ್ಲ. ಪೊಲೀಸರು ನನ್ನ ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಆ ದಿನ ನಾವು ಮೃತ ಅರುಣನ ಜೊತೆ ಊಟಕ್ಕೆ ಹೋದ ಸಮಯದಲ್ಲಿ ಆತ ಆರಾಮಾಗಿದ್ದು ಆತ ಬೇರೆಯವರ ಜೊತೆ ಮೊಬೈಲಿನಲ್ಲಿ ಮಾತನಾಡುತ್ತಿರಲಿಲ್ಲ. ಮು.ಮ.2 ನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನಾನು 10 ನೇ ತರಗತಿ ಓದಿರುತ್ತೇನೆ. ನಾನು ಘಟನೆ ಆಗಿದೆ ಎಂದು ಹೇಳುವ ದಿಃ20.11.2022 ರಂದು ಆಗಿರುತ್ತದೆ ಎಂದರೆ ಸರಿ. ಆ ದಿನ ನಾವು ಅರುಣನ ಜೊತೆ ಊಟ ಮಾಡುವ ಸಮಯದಲ್ಲಿ ಯಾವುದೇ ಹಣಕಾಸಿನ ವಿಚಾರವಾಗಿ ಆತ ಯಾರೋ ಜೊತೆಯಲ್ಲಿ ಮೊಬೈಲಿನಿಂದ ಸುಮಾರು ಹೊತ್ತು ಟೆನ್ಷನ್ನಿಂದ ಮಾತನಾಡುತ್ತಿದ್ದ ಎಂದರೆ ಸರಿಯಲ್ಲ. ಆ ದಿನ ನಾವು ಸದರಿ ವಿಚಾರ ವಿಚಾರಿಸಿಲ್ಲ ಎಂದರೆ ಸರಿಯಲ್ಲ. ನಾವು ಆ ದಿನ ಊಟ ಮುಗಿಸಿಕೊಂಡು ದೊಡ್ಡಅರಸಿನಕರ ಸೊಸೈಟಿ ಬಳಿ ಸಂಜೆ 4.00 ಸಮಯದಲ್ಲಿ ಬಂದಾಗ ಎಲ್ಲಾ ಆರೋಪಿತರು ಗುಂಪುಗಟ್ಟಿಕೊಂಡು ಅರುಣನ ಬಳಿ ಬಂದು ಯಾವುದೋ ಹಳೇ ದ್ವೇಷದಿಂದ ಎಲ್ಲಾ ಆರೋಪಿತರು ಅವನಿಗೆ ಬೋಳಿಬಮಗನೆ, ಸೂಳೆಮಗನೆ, ನಿನ್ನನ್ನು ಈ ದಿವಸ ತೀರಿಸುತ್ತೇವೆ ಎಂದು ಬೈದು 1, 2 ಮತ್ತು 4 ನೇ ಆರೋಪಿತರು ಅಲ್ಲೆ ಬಿದ್ದಿದ್ದ ದೋಣ್ಣೆ ಮತ್ತು ಕಲ್ಲಿನಿಂದ ಅರುಣನ ಮೈಕೈ ಮೇಲೇ ಹೊಡೆದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ-2, 1 ಹಾಗೂ ಅಲ್ಲೇ ಹೋಗುತ್ತಿದ್ದ ಚಾಸಾ-4 ಮತ್ತು ಇತರೆ ಜನರು ಬಿಡಿಸಿದಾಗ ಆರೋಪಿತರಲ್ಲರೂ ಹೊರಟು ಹೋದರು ಎಂದರೆ ಸರಿಯಲ್ಲ.

**2.** ನಂತರ ಆತನನ್ನು ಬೈಕಿನಲ್ಲಿ ಕೂರಿಸಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಗೊತ್ತಿಲ್ಲ. ನಂತರ ಆತನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಸಮಯದಲ್ಲಿ ಆರೋಪಿತರು ಆತನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನಂತರ ಆತ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಮಯದಲ್ಲಿ 10.30 ರಲ್ಲಿ ಮೃತಪಟ್ಟಿರುತ್ತಾನೆ ಎಂದರ ಸರಿ.

**3.** ನಾನು ಘಟನೆಯನ್ನು ಕಣ್ಣಾರೆ ನೋಡಿರುತ್ತೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಪ್ರಕಾರ ನಾನು ಪೊಲೀಸರು ಮುಂದೆ ನಾನು ಹೇಳಿಕೆಯನ್ನು ನೀಡಿರುತ್ತೇನ ಎಂದರ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕಯನ್ನು ನಿಪಿ-11 ಎಂದು ಗುರುತಿಸಲಾಯಿತು. ಎಲ್ಲ ಆರೋಪಿತರು ಸೇರಿ ಮೃತ ಅರುಣನ ಮೇಲೆ ಹಲ್ಲೆ ಮಾಡಿದ ಕಾರಣ ಕಪ್ಪ ತೀರಿಕೊಂಡಿರುತ್ತಾನೆ ಎಂದು ನನಗೆ ಗೊತ್ತಿದ್ದರೂ ಸಹ ಈಗ ನಾನು ಆರೋಪಿತರಿಗೆ ನನಗೆ ಪರಿಚಯವಿದ್ದ ಕಾರಣ ಹಾಗೂ ನಮ್ಮ ಗ್ರಾಮದವರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಅದೇ ರೀತಿ ಮು.ಮ.2 ರಿಂದ 1 ರಿಂದ 5 ನೇ ಆರೊಪಿತರು ಮೃತ ಅರುಣನ ಮೇಲೆ ಸೊಸೈಟಿ ಬಳಿ ಹಲ್ಲೆ ಮಾಡಿರುವುದನ್ನು ಕಣ್ಣಾರೆ ನೋಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಹೆಚ್.ಡಿ.ಆರ್. ವಕೀಲರಿಂದಃ

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ನುಡಿದಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.